ಶ್ರೀ ಬಿ. ಹುಚ್ಚೇಗೌಡರು.—ಅದನ್ನು ಆಡಿಟ್ ಮಾಡುವುದಕ್ಕೆ ಏನು ಏರ್ಪಾಡು ಮಾಡಿದೆ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದು ಆಗಲೇ ಆಡಿಟ್ ಆಗಿರಬೇಕು.

ಶ್ರೀ ಬಿ. ಹುಚ್ಚೇಗೌಡರು.—ಕೆಲವು ಕಡೆ ವನೂರಾಗಿರುವುದು ಸರಿಯಾಗಿ ಜಮಾ ಆಗಿಲ್ಲವೆಂದು ನನಗೆ ವರ್ತಮಾನ ಬಂದಿದೆ. ಆದ್ದರಿಂದ ಹೇಳಬೇಕು.

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಮಾನ್ಯ ಸದಸ್ಯರು ಅದನ್ನು ಖಚಿತವಾಗಿ ತಿಳಿಸಿದರೆ ಆ ವಿಚಾರವನ್ನು ಕೇಂದ್ರ ಸಮಿತಿಯವರ ಗಮನಕ್ಕೆ ತರಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಅದನ್ನು ತಾವೇ ತಿಳಿಸಬೇಕು. ಆಡಿಟ್ ಆಗಿದೆಯೇ, ಇಲ್ಲವೇ ಎಂಬುದು ನನಗೆ ಹೇಗೆ ಗೊತ್ತಾಗುತ್ತದೆ ? ತಾವು ಪ್ರಕಟಿಸಿದ ಮೇಲೆ ತಾನೆ ಅದನ್ನು ನೋಡಿ ಆಗಿಲ್ಲದಿರುವುದನ್ನು ನಾವು ಹೇಳುವುದು ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಈ ವಿಚಾರದಲ್ಲಿ ಸರ್ಕಾರದವರು ನೇರವಾಗಿ ಪ್ರವೇಶ ಮಾಡಿಲ್ಲ. ಇದನ್ನು ಕೇಂದ್ರ ಸಮಿತಿಯವರು ಮಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ನ್ಯೂನತೆ ಇಂಥ ಕಡೆ ಇದೆಯೆಂದು ಹೇಳಿದರೆ ಅದನ್ನು ಸಮಿತಿಯವರ ಗಮನಕ್ಕೆ ತರಬಹುದು. ಅವರು ಅದನ್ನು ವಿಚಾರ ಮಾಡುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗಲ್ಲ, ಇದರಲ್ಲಿ ಸರ್ಕಾರಕ್ಕೆ ಜವಾಬ್ದಾರಿ ಹೆಚ್ಚಾಗಿದೆ. ಅದಕ್ಕೆ ಸರಿಯಾದ ಲೆಕ್ಕ ತಯಾರಾಗಬೇಕು. ನಾವು ಅದನ್ನು ನೋಡಬೇಕ್ಕಾದರೆ ಸರ್ಕಾರದವರು ಪ್ರಕಟಿಸಿದ ಮೇಲೆ ತಾನೆ ? ಆಮೇಲೆ ಇಂಥ ಕಡೆ ಅನ್ಯಾಯ ನಡೆದಿದೆಯೆಂದು ಹೇಳಬಹುದು.

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—Presumption ಗೆ ಕಾರಣವಿಲ್ಲ. ಎಲ್ಲಾ ಸರ್ಕಾರದವರೇ ನೋಡಿಕೊಳ್ಳಬೇಕೆಂದು ಭಾವಿಸುವುದು ಸರಿಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆಡಿಟ್ ವರದಿಯನ್ನು ಪ್ರಕಟಿಸುವುದು ಯಾವಾಗ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಸಂಬಂಧಪಟ್ಟವರನ್ನು ಕೇಳಬೇಕು, ಇದುವರೆಗೆ ಆಗಲೇ ಪ್ರಕಟಿಸಿರಬಹುದು ಅಥವ ಇಲ್ಲದಿರಬಹುದು. ಅವರನ್ನು ವಿಚಾರಮಾಡಬೇಕು. ಈ ಕೆಲಸವನ್ನು ಸರ್ಕಾರದವರು ಮಾಡುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ನಮ್ಮ ದೇಶದ್ದು ಮಾತ್ರ ನಾನು ಕೇಳುತ್ತಿರುವುದು.

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದೂ ಸರ್ಕಾರದ ಕೆಲಸವಲ್ಲ.

Mr. SPEAKER.—Next Question. No. 22. Sri H. C. Linga Reddy.

Working of Borstal Institution in the State.

Q.—22 **Sri H. C. LINGA REDDY** (Kolar District—General).—

Will the Government be pleased to state :—

(a) whether they are starting a Borstal School in the State;

(b) whether it is a fact that they have selected 100 acres of land for the purpose already;

(c) the total expenditure of the scheme;

(d) how long it will take to put the scheme into practice ?

A.—**The Hon'ble Sri K. T. BHASHYAM** (Minister for Law and Labour)—

(a) The proposal is under consideration.

(b) Certain sites have been inspected to see if they are suitable for locating the School.

(c) Rupees one lakh is the estimated expenditure excluding the cost of acquisition, if any.

(d) It is not possible to state the time within which the scheme will be implemented; but action is being taken to implement it as expeditiously as possible.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ನಮ್ಮ ನಂಸ್ಥಾನದಲ್ಲಿ ಬಾರ್‌ಸ್ಟರ್ ಸ್ಕೂಲನ್ನು ಮಾಡುವ ಯೋಚನೆಯಿದೆಯೆ ? ಅದಕ್ಕೆ ಒಂದು ಆಕ್ಟ್ ಆಗಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಇದೆ ; ಆಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಆ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತೆಗೆದು ಕೊಂಡಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಬಾರ್ಸ್ಟರ್ ಸ್ಕೂಲುಗಳಲ್ಲಿ ತಪ್ಪು ಮಾಡಿ ಶಿಕ್ಷೆಯನ್ನನುಭವಿಸುತ್ತಿರುವ ಯುವಕರಿಗೆ ಕೈಗಾರಿಕೆ, ವೃತ್ತಿ ಶಿಕ್ಷಣ ಮುಂತಾದುವುಗಳಲ್ಲಿ ಶಿಕ್ಷಣ ಕೊಡುವುದಕ್ಕೆ ಏರ್ಪಾಡಾಗಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸ್ಕೂಲು ತೆರೆದ ಮೇಲೆ ತಾನೆ ಆ ಏರ್ಪಾಡು ಮಾಡುವುದು?

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಇದುವರೆಗೆ ಆ ಉದ್ದೇಶದಿಂದ ಕಾರ್ಯಕ್ರಮ ತೆಗೆದುಕೊಂಡಿಲ್ಲವೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ತೆಗೆದು ಕೊಂಡಿದೆ. ಸೆಂಟ್ರಲ್ ಜೈಲಿನಲ್ಲಿ ಇದುವರೆಗೆ ಒಂದು ಕಡೆ ಸೆಗ್ರಿಗೇಟ್ ಮಾಡಿ ಶಿಕ್ಷಣವು ಒಂದು ತರಹ ನಡೆಯುತ್ತಿತ್ತು. ಇನ್ನುಮೇಲೆ ಬೇರೆ ಕಡೆ ಬಾರ್ಸ್ಟರ್ ಸ್ಕೂಲನ್ನು ಮಾಡಿ ಜನರಿಗೆ ತಕ್ಕಂತೆ ಶಿಕ್ಷಣ ಕೊಡಲು ಸರಿಯಾದ ಏರ್ಪಾಡು ಮಾಡಬೇಕೆಂದಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಇದಕ್ಕೆ ಸೈಟನ್ನು ಚುನಾಯಿಸಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಕೆಲವು ಕಡೆ ನೋಡಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಎಲ್ಲೆಲ್ಲಿ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾರ್ಕಾರು ಕಡೆ ನೋಡಿದೆ ; ಭಿಕ್ಷುಕರ ಕಾಲೋನಿ ಎದುರಿಗೆ ಆಜಮಾಯಿಷಿ ಮಾಡಿದೆ, ಹಾಗೆಯೇ ಇನ್ನೂ ಕೆಲವು ಕಡೆ ಪರಿಶೀಲಿಸಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.— ಎಷ್ಟು ದಿವಸಗಳಿಂದ ನೋಡಿದೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ನಾಲ್ಕಾರು ತಿಂಗಳಿನಿಂದ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಎಷ್ಟು ದಿವಸಗಳಲ್ಲಿ ಕಾರ್ಯಗತವಾಗುವುದು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಹಾಗೆ ಮಾಡುವುದಕ್ಕೆ ಯೋಜನೆಯಾಗಿದೆಯೆ ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು —ಆಗಿದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಏನೇನಾಗಿದೆ ?

ಮಾನ್ಯ ಶ್ರೀ ಕೆ ಟಿ. ಭಾಷ್ಯಂರವರು.—ಕಟ್ಟಡ ತಯಾರಿಸುವುದು ಬೇಕಾದ ಕೈಗಾರಿಕೆಗಳನ್ನು ಏರ್ಪಡಿಸಿ ಶಿಕ್ಷಣಕ್ಕೆ ಅನುಕೂಲ ಮಾಡುವುದು ಮುಂತಾದ್ದು.

Sri H. C. LINGA REDDY.—What is the estimate of the scheme ?

The Hon'ble Sri K. T. BHASHYAM.—It runs into two or three lakhs of rupees.

Sri H. C. LINGA REDDY.—May I know the probable time it may take for fruition ?

The Hon'ble Sri K. T. BHASHYAM.—I could not tell you. We will try to do it as early as possible.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಆ ಸ್ಕೂಲಿಗೆ ಎಷ್ಟು ಜನ ಬರಬಹುದು ?

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸುಮಾರು ನೂರು ಹುಡುಗರು ಬರಬಹುದೆಂಬ ನಿರೀಕ್ಷೆಯಿದೆ. ಅದಕ್ಕೆ ಹೆಚ್ಚು ಮಂದಿ ಬರುತ್ತಾರೆಂಬುದಾಗಿ ಹೇಳಲು ಸಾಧ್ಯವಿಲ್ಲ.

ಶ್ರೀ ಎಂ. ಗೋವಿಂದ ರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).— ಸರ್ಕಾರದವರು ಈ ಸ್ಕೂಲನ್ನು ನಡೆಸುವುದಕ್ಕೆ ಸಾಕಷ್ಟು ಹುಡುಗರು ಸಿಕ್ಕಬಹುದು ಎಂಬ ಭರವಸೆಯಿದೆಯೆ ?

The Hon'ble Sri K. T. BHASHYAM.—I do not understand what the Hon'ble Member means by saying 'strength'; I expect about a hundred juveniles to come into this place.

Mr. SPEAKER.—Next question, No. 18. Sri H. C. Linga Reddy.

Selection to I.A.S. and I.P.S. from among officers of the State.

Q.—18. **Sri H. C. LINGA REDDY** (Kolar District—General).—

Will the Government be pleased to state :—

(*a*) whether the Special Selection Board, sent down by the India Government to Mysore for selecting candidates for the I.A.S. and the I.P.S. have sent their recommendations to the Mysore Government recently ;

(*b*) whether it is true that grave injustice is done to the Mysore Services both I.A.S and I.P.S. by disqualifying good many of them ;

(*c*) the steps taken by them to further safeguard the interests of the Mysore Services ?

A.—**The Hon'ble Sri H. C. DASAPPA** (Minister for Finance and Industries).—

(*a*) On the recommendations of the Special Recruitment Board, the Government of India have made, for the consideration of Mysore Government, some proposals, on the Scheme of extension of the I.A.S and the I.P.S to Mysore State.

(*b*) This is a matter of opinion and it would be premature to offer an opinion in the matter until recommendations have been fully examined and the proposals finalised.

(*c*) The Government of Mysore have taken and will continue to take whatever steps are necessary, to safeguard the interests of the Officers of the Mysore Civil Service.

Sri H. C. LINGA REDDY.—The Hon'ble Minister has been pleased to say that some recommendations have been made by the select committee. May this House know the recommendations of that committee ?

The Hon'ble Sri H. C. DASAPPA.—They are still in a confidential stage.

Sri H. C. LINGA REDDY.—What are the main lines of the recommendations ?

The Hon'ble Sri H. C. DASAPPA.—The purpose for which they have come you know, is to select people for the I.A.S. and the I.P.S.

Sri H. C. LINGA REDDY.—How many people had sat for the examinations, for the junior and senior cadres ?

The Hon'ble Sri H. C. DASAPPA.—I want notice for the exact number. But practically all the senior officers had sat and quite a large number of the junior officers also.

Sri H. C. LINGA REDDY.—By junior officers, do you mean Amildars also ?